## ಕಳೆದ ಸಂಚಿಕೆಯಲ್ಲಿ



ಲಾಸ್ ವೆಗಾಸ್‌ನಿಂದ ಹಿಂತಿರುಗಿದ ಆಸ್ಕರ್ ವೈಲ್ಡ್, ಅಲ್ಲಿ ನಡೆದುದನ್ನೆಲ್ಲ ತಾತನಿಗೆ ಹೇಳಿ ನಿರಾಳನಾದ. ಸಂದೀಪ್ ಕೊಚಾರಿ ಗುರೂಜಿ ತಮ್ಮ ಕುಟುಂಬಕ್ಕೆ ಮಾಡಿದ ಸಹಾಯಕ್ಕಾಗಿ ಅವರಿಗೆ ಐಷಾರಾಮಿ ಅಪಾರ್ಟ್‌ಮೆಂಟ್ ಒಂದನ್ನು ಗುನ್ನಾಲಾಲ್ ನೋಂದಣಿ ಮಾಡಿಕೊಟ್ಟರು. ಆ ಸಮಯದಲ್ಲಿ, ಮನಸ್ಸು ಬಿಚ್ಚಿ ಮಾತನಾಡಿದ ಗುರೂಜಿ, ಪೂರ್ವಿಕಾಳ ಕುಟುಂಬದ ಹಿನ್ನೆಲೆಯನ್ನು ವಿವರವಾಗಿ ತಿಳಿಸಿದರು. ಸಾಧ್ಯವಾದರೆ ಪೂರ್ವಿಕಾಳ ಸಂಬಂಧವನ್ನು ಕೈಬಿಡುವಂತೆ ಸೂಚಿಸಿದರು. ತನ್ನ ಮನಸ್ಸಿನಲ್ಲಿದ್ದುದನ್ನೇ ಸ್ವಾಮೀಜಿಯೂ ಹೇಳಿದ್ದು ಕೇಳಿ ಗುನ್ನಾಲಾಲ್‌ಗೆ ಸಮಾಧಾನವಾಯಿತು. ಭಾರತಕ್ಕೆ ಮರಳಿ ಎಂದಿನ ಜೀವನಕ್ಕೆ ಒಗ್ಗಿಕೊಂಡ ವೈಲ್ಡ್‌ಗೆ ಇದ್ದಕ್ಕಿದ್ದಂತೆ ತನ್ನ ಪದವಿ ತರಗತಿಯ ಸಹಪಾಠಿ ಪ್ರಿಯಾಂಕಾ ಅಗರ್ವಾಲ್ ನೆನಪಾಯಿತು. ಅವಳನ್ನು ಹುಡುಕಿಕೊಂಡು ಹೋದವನಿಗೆ ಹೊಸ ಲೋಕ ಎದುರಾಯಿತು. 'ಟ್ರಾನ್ಸ್' ಎನ್ನುವ ಇನ್‌ಸ್ಟಿಟ್ಯೂಟ್ ನಡೆಸುತ್ತಿದ್ದ ಪ್ರಿಯಾಂಕಾ, ಕಾಲೇಜು ದಿನಗಳಲ್ಲಿ ಸೋನಾನ ಬಗ್ಗೆ ತನಗೆ ಆಸಕ್ತಿಯಿದ್ದುದಾಗಿ ಹೇಳಿಕೊಂಡಳು. ಈಗ ಸೋನಾನಿಗೆ ಅವಳ ಬಗ್ಗೆ ಆಸಕ್ತಿಯಿದ್ದರೂ, ಅವಳು ತನ್ನದೇ ದಾರಿಯಲ್ಲಿ ಬಹು ದೂರ ಸಾಗಿ ಹೋಗಿದ್ದಳು.

ಅಲೆಗ್ಸಾಂಡರನದು ಯಾವಾಗಲೂ ನೇರಾನೇರ ಮಾತುಗಳೇ.

'ಬಿಜಿಯಾಗಿಬಿಟ್ಟೆ ಸ್ವಲ್ಪ. ಓಹ್, ಅವತ್ತು ಕಾಮಾಟಿಪುರವನ್ನು ನೋಡಿ ಸುಸ್ತಾಗಿಬಿಟ್ಟೆ. ಸುಧಾರಿಸಿಕೊಳ್ಳಲು ವಾರ ಬೇಕಾಯ್ತು ನೋಡು. ಧಾರಾವಿಯ ಸಹವಾಸವೇ ಬೇಡ ಅಂತ ಸುಮ್ಮನಾದೆ. ಮುಂದೆ ಯಾವಾಗಲಾದರೊಮ್ಮೆ ಖಂಡಿತಾ ನಿನ್ನ ಜೊತೆಯಲ್ಲಿ ಸುತ್ತುತ್ತೇನೆ' ಮನಸ್ಸಲ್ಲಿದ್ದುದ್ದನ್ನೆ ಮಾತಿಗಿಳಿಸಿದ ವೈಲ್ಡ್.

'ನೀನು ನೋಡೋ ಹೊತ್ತಿಗೆ ಧಾರಾವಿಯಲ್ಲಿ ಸ್ಲಂ ಇರೋದೇ ಇಲ್ಲ. ನಿಂಗೆ ಗೊತ್ತಿಲ್ವಾ? ಧಾರಾವಿ ಮರುಅಭಿವೃದ್ಧಿಯ, ಐ ಮೀನ್ ಡೆವೆಲಪ್‌ಮೆಂಟ್ ಪ್ರಾಜೆಕ್ಟ್ ಅದಾನಿ ಕಂಪನಿಯ ಪಾಲಾಗಿದೆ. ಅದಾನಿ ಗೊತ್ತಲ್ಲ, ಐದಾರು ವರ್ಷದಲ್ಲಿ ಪ್ರಾಜೆಕ್ಟ್ ಕಂಪ್ಲೀಟ್ ಮಾಡಿಬಿಡ್ತಾನೆ. ಆಗ ಧಾರಾವಿ ತನ್ನ ಹರಿದ ಬಟ್ಟೆಯನ್ನು ಕಳಚಿ ಹೊಸ ಬಟ್ಟೆಗಳನ್ನು ತೊಟ್ಟು ಫಳಫಳ ಮಿನುಗುತ್ತಿರುತ್ತದೆ. ಅಂದರೆ ಅಲ್ಲಿ ಜೋಪಡಿಗಳ ಬದಲು ಗಗನಚುಂಬಿ ಕಟ್ಟಡಗಳು ತಲೆಯೆತ್ತಿ ನಿಲ್ಲುತ್ತವೆ. ಇರಲಿ, ಇನ್ನೊಂದು ಹೊಸ ವಿಷಯಕ್ಕೆ ಬರುತ್ತೇನೆ. ಅದನ್ನು ಹೇಳಲೆಂದೇ ನಿನಗೆ ಫೋನ್ ಮಾಡಿದ್ದು. ಬಾಂದ್ರಾದ ಡೋರ್ ನಂ ಒನ್ ಡ್ಯಾನ್ಸ್ ಬಾರ್ ಲೈಸೆನ್ಸನ್ನ ನಾನು ಐದು ವರ್ಷಗಳ ಮಟ್ಟಿಗೆ ಲೀಸ್‌ಗೆ ಹಾಕಿಸಿಕೊಂಡಿದ್ದೀನಿ. ಮುಂಬಯಿಯಲ್ಲಿ ಡ್ಯಾನ್ಸ್ ಬಾರುಗಳನ್ನು ಬ್ಯಾನ್ ಮಾಡಿದ್ದಾರೆ. ಅದು ಬರಿ ಸರ್ಕಾರಿ ಆದೇಶದಲ್ಲಿ ಮಾತ್ರವೇ. ಮುಂಬಯಿಯ ನಿಜವಾದ ಜೀವ ಅಡಗಿರುವುದೇ ಡ್ಯಾನ್ಸ್ ಬಾರ್ ಮತ್ತು ನೈಟ್ ಲೈಫ್ ಕ್ಲಬ್ಬುಗಳಲ್ಲಿ. ಮುಂಬಯಿ ಮಹಾನಗರ ಪಾಲಿಕೆಯ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳ ಆದಾಯದ ಮೂಲಗಳು ಕೂಡ ಇವೇ. ಅಲ್ಲದೆ ಭೂಗತ ಲೋಕದವರ, ಮುಂಬಯಿಯ ಸಾವಿರಾರು ಡ್ಯಾನ್ಸ್ ಗರ್ಲ್‌ಗಳ ಬದುಕು ಕೂಡ ಮುಂಬಯಿಯ ನೈಟ್ ಲೈಫ್ ಮೇಲೆಯೇ ಆಧಾರವಾಗಿರೋದು' ಅಲೆಗ್ಸಾಂಡರನ ಮಾತುಗಳನ್ನು ತುಂಡರಿಸಲೆಂದೇ

'ಅಭಿನಂದನೆಗಳು ನಿನ್ನ ಹೊಸ ವ್ಯಾಪಾರಕ್ಕೆ' ಎಂದು ಹೇಳಿದ್ದ.

'ನಿನ್ನಂಥವನಿಗೆ ಮುಂಬಯಿಯ ನೈಟ್ ಲೈಫ್ ಬಗ್ಗೆ ಹೇಳೋದು ವ್ಯರ್ಥ. ನೀನು ನಿಜವಾಗಿಯೂ ಸಾಹಿತ್ಯಕ್ಕೆ ಒಂದು ಹೊಸ ಅರ್ಥವನ್ನು ಹುಡುಕಬೇಕಾದರೆ ಮುಂಬಯಿಯ ನೈಟ್ ಲೈಫ್‌ನಲ್ಲಿ ಒಂದಷ್ಟು ದಿನ ಮುಳುಗಿ ನೋಡು. ನೀನು ನೋವು ಮತ್ತು ನಲಿವುಗಳನ್ನು ಏಕಕಾಲದಲ್ಲಿ ಕಣ್ತುಂಬಿಕೊಳ್ಳುತ್ತೀಯ. ಡೋರ್ ನಂಬರ್ ಒನ್ ಬಾರನ್ನು ಕಂಪ್ಲೀಟಾಗಿ ನನ್ನ ತಮ್ಮ ನೋಡ್ಕೊತಾನೆ. ಮ್ಯಾನೇಜರ್ ಕೂಡ ಒಳ್ಳೆಯವನು. ನೀನು ಯಾವಾಗ ಬೇಕಾದರೂ ಹೋಗಬಹುದು. ನಿನಗೆ ಏನು ಬೇಕೊ ಎಲ್ಲಾ ಅರೇಂಜ್‌ಮೆಂಟ್ ಅನ್ನು ಅವರು ಮಾಡಿಕೊಡುತ್ತಾರೆ. ಜಸ್ಟ್ ನಿನ್ನ ಪರಿಚಯ ಹೇಳು ಸಾಕು. ನೀನು ಬರುವ ದಿನ ಮೊದಲೇ ಫೋನ್ ಮಾಡು, ನಾನೂ ಬಂದು ನಿನಗೆ ಕಂಪನಿ ಕೊಡುತ್ತೇನೆ ಒಮ್ಮೆ. ಮರೆತಿದ್ದೆ, ನನ್ನ ನಂಬರನ್ನು ಸೇವ್ ಮಾಡಿಕೊ. ಇನ್ನೊಂದು ವಿಷಯ ಕೇಳಿ ಬಂತು ನಿಜವಾ?' ಮಾತಿಗೆ ಬ್ರೇಕ್ ಕೊಟ್ಟಿದ್ದ.

'ಏನದು ಹೇಳು?' ತಣ್ಣಗೆ ಕೇಳಿದ್ದ.

'ಮುಂಬಯಿ ಮಹಾನಗರ ಪಾಲಿಕೆಯ ಕಮಿಷನರ್ ಮಗಳನ್ನು ಮದುವೆಯಾಗುತ್ತಿರುವೆಯಂತೆ ನಿಜವಾ? ಹಾಗೇನಾದರೂ ಆದರೆ ನಿನ್ನ ಮಾವನಿಗೆ ನನ್ನನ್ನು ಪರಿಚಯ ಮಾಡಿಕೊಡು. ನಮ್ಮ ಬಿಸಿನೆಸ್‌ಗೆ ಅನುಕೂಲ ಆಗ್ತದೆ' ಮಾತು ಮೃದುವಾಗಿದ್ದವು.

'ಹಾಗೊಂದು ಪ್ರೊಪೋಸಲ್ ಇತ್ತು. ಆದರೆ ಏಕೋ ಸಂಬಂಧ ಸರಿ ಬರಲಿಲ್ಲ' ಮಾತುಗಳನ್ನು ಹಿಡಿದು ಹಿಡಿದು ಹೇಳಿದ್ದ.

'ತುಂಬಾ ದೊಡ್ಡ ಕುಳ ಅಂತೆ. ಮನಿ, ಪವರ್ ಎರಡೂ ಇದೆ. ಅಂಥ ಸಂಬಂಧಾನ ಬಿಡೋದುಂಟಾ? ಮರೆತಿದ್ದೆ ನೋಡು, ಪೀಟರ್ ಸ್ಕಾಟ್ ಅಂತ ಬಿಲ್ಡರ್. ಅಪ್ಪನಿಗೆ ತುಂಬಾ ಪರಿಚಯದವ. ಇವತ್ತು ಹಾರ್ಟ್ ಅಟ್ಯಾಕ್ ಆಗಿ ಸತ್ತಿದಾನೆ. ಹೇಗೆ ಗೊತ್ತಾ? ಅವನ ತಮ್ಮನ ಮಗ ಅದೇ ನಿನಗೆ ಪ್ರೊಪೋಸ್ ಮಾಡಿದ್ದ ಹುಡುಗಿಯನ್ನು ಲವ್ ಮಾಡುತ್ತಿದ್ದನಂತೆ. ಆ ವಿಷಯದಲ್ಲಿ ವಾರದ ಹಿಂದೆ ಕಮಿಷನರ್‌ಗೆ ಧಮ್ಕಿ ಹಾಕಿದ್ದನಂತೆ. ಪವರ್ ಮುಂದೆ ಮನಿ, ರೌಡಿಸಂ ಕೆಲಸ ಮಾಡಲ್ಲ. ಎನ್‌ಕೌಂಟರ್ ಸ್ಪೆಷಲಿಸ್ಟ್ ದಯಾನಾಯಕ್ ಕೇವಲ ಸಬ್ ಇನ್ಸ್‌ಪೆಕ್ಟರ್. ಆದರೂ ಮುಂಬಯಿಯ ಡಾನ್‌ಗಳೆಲ್ಲ ಥರಥರ ನಡುಗ್ತಿದ್ರು. ಪೀಟರ್ ಸ್ಕಾಟ್‌ನ ಬೇನಾಮಿ ಕಟ್ಟಡಗಳನ್ನೆಲ್ಲಾ ಐಡೆಂಟಿಫೈ ಮಾಡಿಸಿ ಕಮಿಷನರ್ ನೋಟಿಸ್ ಕೊಟ್ಟಿದ್ದರಂತೆ. ಅದಕ್ಕೆ ಹೆದರಿ ಪೀಟರ್ ಸ್ಕಾಟ್‌ಗೆ ಹಾರ್ಟ್ ಅಟ್ಯಾಕ್ ಆಯಿತಂತೆ. ಅವಮಾನ ಆಗ್ತದೆ ಅಂತ ಸ್ಲೀಪಿಂಗ್ ಟ್ಯಾಬ್ಲೆಟ್ ನುಂಗಿ ಆತ್ಮಹತ್ಯೆ ಮಾಡಿಕೊಂಡಿರುವನೆಂಬ ಟಾಕ್ ಕೂಡ ಇದೆ. ಯಾವಾಗಲೂ ಪವರ್‌ನೊಂದಿಗೆ ರಾಜಿ, ಸಂಧಾನಗಳನ್ನು ಮಾಡಿಕೊಂಡೇ ಹೋಗಬೇಕು. ನಮ್ಮಪ್ಪ ಈ ವಿದ್ಯೆಯನ್ನು ನನಗೆ ಚೆನ್ನಾಗಿ ಕಲಿಸಿದ್ದಾನೆ. ಎನಿವೇಸ್, ಕಮಿಷನರ್ ಸಂಬಂಧದ ಬಗ್ಗೆ ಮತ್ತೊಮ್ಮೆ ಯೋಚಿಸು. ಆಪರ್ಚುನಿಟೀಸ್ ಆರ್ ಲೈಕ್ ಸನ್ ರೈಸಸ್, ಇಫ್ ಯು **wait** ಟೂ ಲಾಂಗ್ ಯು ಮಿಸ್ ದೆಮ್' ಅನ್ನೊ **proverb** ಯಾವತ್ತೂ ಸುಳ್ಳಾಗಲ್ಲ' ಎಂದು ಮಾತು ಮುಗಿಸಿದ್ದ. ಅವನ ಮಾತುಗಳು ಆಸ್ಕರ್ ವೈಲ್ಡನ ಮನಸ್ಸನ್ನು ಮತ್ತೆ ಕಲಕಲು ಪ್ರಾರಂಭಿಸಿದವು.

* * *

ಈ ಹದಿನೈದು ದಿನಗಳಿಂದ ನಡೆದ ವಿದ್ಯಮಾನಗಳು ಆಸ್ಕರ್ ವೈಲ್ಡನನ್ನು ಸ್ವಲ್ಪ ಆಳವಾಗಿಯೇ ಡಿಸ್ಟರ್ಬ್ ಮಾಡಿದ್ದವು. ಪ್ರಿಯಾಂಕಾ ಅಗರ್ವಾಲ್, ಅಂಜಲಿ ದೇಸಾಯಿ, ಪೂರ್ವಿಕಾ, ಮ್ಯಾಥ್ಯೂ ಅಲೆಗ್ಸಾಂಡರ್ ಇವರೆಲ್ಲರ ಮಾತುಗಳು ಅವನ ಮನದಲ್ಲಿ ಒಟ್ಟಿಗೆ ನರ್ತಿಸುತ್ತಾ ಬಲವಾದ ಗೊಂದಲಗಳಲ್ಲಿ ಮುಳುಗಿಸುತ್ತಿದ್ದವು. ಇದರಿಂದ ಹೊರಬರಲು ಅವನು ತಮ್ಮ ಕಂಪನಿ, ಫ್ಯಾಕ್ಟರಿಗಳ ಕೆಲಸಗಳಲ್ಲಿ ಆಸಕ್ತಿಯಿಂದ ತೊಡಗಿಸಿಕೊಳ್ಳಲು ಪ್ರಯತ್ನಿಸಿದ.

ಅಂದು ಇದ್ದಕ್ಕಿದ್ದಂತೆ ಅವನು ಸಂಜೆ ಏಳೂವರೆ ಗಂಟೆಗೆ ಬಾಂದ್ರಾದ ಡೋರ್ ನಂಬರ್ ಒನ್ ಡ್ಯಾನ್ಸ್ ಬಾರನ್ನು ಪ್ರವೇಶಿಸಿದ್ದ. ಅಲ್ಲಿನ ಮ್ಯಾನೇಜರ್‌ಗೆ ತನ್ನ ಪರಿಚಯವನ್ನೇನೂ ಮಾಡಿಕೊಳ್ಳಲಿಲ್ಲ. ಮಂದ ಬೆಳಕಿನಲ್ಲಿ ಜನ ಕುಡಿಯಲು ಪ್ರಾರಂಭಿಸಿದ್ದರು. ಟೇಬಲ್ ಮುಂದೆ ನಿಂತು ಆರ್ಡರ್ ತೆಗೆದುಕೊಳ್ಳುವವನಿಗೆ ಎರಡು ಪೆಗ್ ಐಸ್ ವೈನ್ ಹಾಗೂ ಒಂದು ಪ್ಲೇಟ್ ಅಂಜಲ್ ಫಿಶ್ ಫ್ರೈ ಹೇಳಿದ. ಎಂಟು ಗಂಟೆಗೆ ಡ್ಯಾನ್ಸ್ ಪ್ರಾರಂಭವಾಗುತ್ತದೆಂದು ಸೂಟುಧಾರಿಯೊಬ್ಬ ಸ್ಟೇಜ್ ಮೇಲೆ ಬಂದು ಅನೌನ್ಸ್ ಮಾಡಿದ. ಸಂಗೀತಕ್ಕೆ ತಕ್ಕಂತೆ ಸ್ಟೇಜ್ ಮೇಲೆ ಫೋಕಸ್ ಮಾಡಿದ್ದ ಬಣ್ಣ ಬಣ್ಣದ ವಿದ್ಯುತ್ ದೀಪಗಳು ಸ್ಟೇಜನ್ನೇ ಕುಣಿಸುತ್ತಿರುವಂತೆ